www.prepp.in

Prepp
Your Personal Exams Guide

| | |
|---|---|
| Test Paper : **I** | Test Booklet Serial No. : ____________ |
| Test Subject : **GENERAL PAPER** | OMR Sheet No. : ____________ |
| Test Subject Code : **K-0014** | Roll No. ☐☐☐☐☐☐☐☐ (Figures as per admission card) |
| Test booklet Code : **W** | |

**Name & Signature of Invigilator/s**

| | |
|---|---|
| Signature: ____________ | Signature : ____________ |
| Name : ____________ | Name : ____________ |

**Paper : I**

**Subject : GENERAL PAPER**

Time : 1 Hour 15 Minutes — Maximum Marks : 100

Number of Pages in this Booklet : **24** — Number of Questions in this Booklet : **60**

## ಅಭ್ಯರ್ಥಿಗಳಿಗೆ ಸೂಚನೆಗಳು

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು (60) ಅರುವತ್ತು ಬಹು ಆಯ್ಕೆ ವಿಧದ ಪ್ರಶ್ನೆಗಳನ್ನೊಳಗೊಂಡಿದೆ. ಇವುಗಳಲ್ಲಿನ ಯಾವುದಾದರೂ 50 (ಐವತ್ತು) ಪ್ರಶ್ನೆಗಳನ್ನು ಅಭ್ಯರ್ಥಿಯು ಉತ್ತರಿಸಬೇಕಾಗಿದೆ. ಅಭ್ಯರ್ಥಿಯು 50 ಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಉತ್ತರಿಸಿದ ಪಕ್ಷದಲ್ಲಿ, ಅಭ್ಯರ್ಥಿಯು ಉತ್ತರಿಸಿದ ಮೊದಲ ಐವತ್ತು ಪ್ರಶ್ನೆಗಳ ಮೌಲ್ಯಮಾಪನ ಮಾಡಲಾಗುತ್ತದೆ.
3. ಪರೀಕ್ಷೆ ಪ್ರಾರಂಭವಾದಾಗ, ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ **ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.**
   i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಪ್ರಶ್ನೆ ಪುಸ್ತಿಕೆ ಸ್ವೀಕರಿಸಬೇಡಿ. ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪುಸ್ತಿಕೆಯನ್ನು ಬದಲಾಯಿಸಲಾಗುವುದಿಲ್ಲ , ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರಿತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು, ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ, ಅಂಡಾಕೃತಿಯನ್ನು ಕಪ್ಪಾಗಿಸಬೇಕು.

   ಉದಾಹರಣೆ : (A) (B) ● (D)

   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು. OMR ಉತ್ತರ ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ. ಪ್ರಶ್ನೆಪುಸ್ತಿಕೆ ಒಂದರಲ್ಲಿ ಕೊಟ್ಟಿರುವ ಪುಸ್ತಿಕೆ ಸಂಕೇತವನ್ನು OMR ಹಾಳೆಯಲ್ಲಿ **ಕಡ್ಡಾಯವಾಗಿ** ನಮೂದಿಸಬೇಕು.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು .
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು , ಸಂಗತವಾದ ಸ್ಥಳ ಹೊರತು ಪಡಿಸಿ, ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯ ಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ .**

## Instructions for the Candidates

1. Write your roll number in the space provided on the top of this page.
2. This paper consists of sixty(60) multiple-choice type of questions, out of which the candidate would be required to answer any fifty (50) questions. In the event of the candidate attempting more than fifty questions, the first fifty questions attempted by the candidate would be evaluated.
3. At the commencement of examination, the question booklet will be given to you. In the first 5 minutes, you are requested **to open the booklet and compulsorily examine it as below** :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the oval as indicated below on the correct response against each item.

   **Example** : (A) (B) ● (D)

   where (C) is the correct response.
5. Your responses to the questions are to be indicated in the **OMR Sheet kept inside this Booklet, which is common for both Paper I and Paper II**. If you mark at any place other than in the ovals, the OMR Answer Sheet will not be evaluated.
6. Read the instructions given in OMR carefully. Fill the Test Booklet Code of Paper – I in OMR Sheet **Compulsorily**.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space provided for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet soon after the examination.
11. **Use only Blue/Black Ball point pen.**
12. **Use of any calculator or log table etc., is prohibited.**
13. **There is no negative marks for incorrect answers.**

Prepp
Your Personal Exams Guide

Total Number of Pages : 24

## ಜನರಲ್ ಪೇಪರ್

## ಪೇಪರ್ – I

**ಗಮನಿಸಿ :** ಈ ಪತ್ರಿಕೆಯು **(60) ಅರುವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ.

ಅಭ್ಯರ್ಥಿಗಳು ಯಾವುದಾದರೂ **(50) ಐವತ್ತು** ಪ್ರಶ್ನೆಗಳನ್ನು ಮಾತ್ರ ಉತ್ತರಿಸಬೇಕು.

ಒಂದು ವೇಳೆ **(50) ಐವತ್ತು** ಪ್ರಶ್ನೆಗಳಿಗಿಂತ ಹೆಚ್ಚಿಗೆ ಪ್ರಶ್ನೆಗಳನ್ನು ಉತ್ತರಿಸಿದಲ್ಲಿ, ಮೊದಲ **(50) ಐವತ್ತು** ಪ್ರಶ್ನೆಗಳಿಗೆ ಮಾತ್ರ ಮೌಲ್ಯಮಾಪನ ಮಾಡಲಾಗುವುದು.

**1.** ಸ್ವತಂತ್ರ ಮತ್ತು ಅವಲಂಬಿತ ಪರಿವರ್ತಕಗಳನ್ನು ಈ ಪ್ರಾಕ್‌ಕಲ್ಪನೆಯಲ್ಲಿ ಗುರುತಿಸಿ :

ಓಟ ಒಬ್ಬ ವ್ಯಕ್ತಿಯ ಹೃದಯಬಡಿತವನ್ನು ಹೆಚ್ಚು ಮಾಡುತ್ತದೆ.

(A) ಹೆಚ್ಚುವಿಕೆ (IV) ವ್ಯಕ್ತಿ (DV)
(B) ಹೆಚ್ಚುವಿಕೆ (DV) ವ್ಯಕ್ತಿ (IV)
(C) ಓಟ (DV) ಹೃದಯ ಬಡಿತ (IV)
(D) ಓಟ (IV) ಹೃದಯ ಬಡಿತ (DV)

**2.** ಕ್ರಿಕೆಟ್ ಸ್ಕೋರ್ ಯಾವ ರೀತಿಯ ಪರಿವರ್ತಕ ?

(A) ನಿರಂತರ ಪರಿವರ್ತಕ
(B) ನಿಬಂಧನೆಗೊಳಪಟ್ಟ ಪರಿವರ್ತಕ
(C) ನಿಬಂಧನೆಗೊಳಪಟ್ಟ ಮತ್ತು ನಿರಂತರ ಪರಿವರ್ತಕಗಳು
(D) ಏತನ್ಮಧ್ಯೆ ಸಂಭವಿಸುವ ಪರಿವರ್ತಕ

**3.** ಪರಿವೀಕ್ಷಣಾ ಅಂಕ ಮತ್ತು ನಿರೀಕ್ಷಿತ ಅಂಕಗಳ ವಿಶ್ಲೇಷಣೆಗೆ ಸಹಾಯಕಾರಿಯಾದ ಪರೀಕ್ಷೆ ಯಾವುದು ?

(A) ಎಮ್‌ಎಎನ್‌ಒವಿಎ (MANOVA)
(B) ಟಿ – ಟೆಸ್ಟ್
(C) ಎಎನ್‌ಒವಿಎ (ANOVA)
(D) ಕೈ–ಸ್ಕ್ವೆರ್

**4.** ಗಣನೀಯ ವೃದ್ಧಿಯು ಯಾವ ರೀತಿ ನಮೂನೆ ?

(A) ಅಸಂಭವನೀಯ ನಮೂನೆ
(B) ಸಂಭವನೀಯ ನಮೂನೆ
(C) ಬಹು ಹಂತ ನಮೂನೆ
(D) ಯಾದೃಚ್ಛಿಕ ನಮೂನೆ

**5.** ಸಾಂಸ್ಕೃತಿಕ ಮಾನವಶಾಸ್ತ್ರವನ್ನು ಅಧ್ಯಯನ ಮಾಡಲು ಹೆಚ್ಚಿನ ರೀತಿಯಲ್ಲಿ ಬಳಸುವ ಸಂಶೋಧನಾ ವಿಧಾನ ಯಾವುದು ?

(A) ಸಂದರ್ಶನ
(B) ಸಮಿತಿ ಚರ್ಚೆ
(C) ಭಾಗವಹಿಸುವಿಕೆ ಪರಿವೀಕ್ಷಣೆ
(D) ನಿರ್ದಿಷ್ಟ ಗುಂಪು ಚರ್ಚೆ

**6.** ಡಾ|| ಯು. ಆರ್. ಅನಂತಮೂರ್ತಿಯವರ ಬಗ್ಗೆ ಸಂಶೋಧನೆ ಮಾಡುವಾಗ, ಅವರನ್ನು ಸಂದರ್ಶಿಸಿದಾಗ ದೊರಕುವ ಮಾಹಿತಿಯು ಯಾವ ರೀತಿಯದು ?

(A) ದ್ವಿತೀಯ ಹಂತದ ಮಾಹಿತಿ
(B) ಪ್ರಾಥಮಿಕ ಮಾಹಿತಿ
(C) ತೃತೀಯ ಹಂತದ ಮಾಹಿತಿ
(D) ಸೋಸಿದ ಮಾಹಿತಿ

**7.** 'ಪೋಸ್ಟ್ ಬ್ರಾಡ್‌ಕಾಸ್ಟ್ ಮೀಡಿಯಾ' ಎಂದು ಯಾವುದನ್ನು ಕರೆಯುತ್ತೇವೆ ?

(A) ಜಾನಪದ ಮಾಧ್ಯಮ
(B) ಸಾಮಾಜಿಕ ಮಾಧ್ಯಮ
(C) ಮುದ್ರಣ ಮಾಧ್ಯಮ
(D) ಎಲೆಕ್ಟ್ರಾನಿಕ್ ಮಾಧ್ಯಮ

**8.** ರೋಮನ್ ಕ್ಯಾಥೊಲಿಕ್ ಚರ್ಚಿನವರು 1622ರಲ್ಲಿ ತಮ್ಮ ಧರ್ಮವನ್ನು ಪಸರಿಸಲು ಬಳಸಿದ ತಂತ್ರ ಮುಂದೆ ಏನೆಂದು ಕರೆಸಿಕೊಂಡಿತು ?

(A) ಪ್ರಚಾರ
(B) ಧಾರ್ಮಿಕ ಪ್ರಚಾರ
(C) ಸೆಮಿನರಿ ಭಾಷಣ
(D) ಯೋಜಿತ ಪ್ರಚಾರ

www.prepp.in

Your Personal Exams Guide

Total Number of Pages : 24

# GENERAL PAPER
## Paper – I

**Note :** This paper contains **Sixty (60)** multiple choice questions. **Each** question carrying **two (2)** marks.
Candidate is expected to answer any **Fifty (50)** questions.
In case more than **Fifty (50)** questions are attempted, only the **first Fifty (50)** questions will be evaluated.

**1.** Identify independent and dependent variables in this hypothesis :
Running will increase a person's heart rate.
(A) Increase (IV), Person (DV)
(B) Increase (DV), Person (IV)
(C) Running (DV), Heart rate (IV)
(D) Running (IV), Heart rate (DV)

**2.** Cricket score is what kind of variable ?
(A) Continuous variable
(B) Discrete variable
(C) Both discrete and continuous variable
(D) Intervening variable

**3.** One test that helps analyze observed frequency and expected frequency
(A) MANOVA
(B) t-test
(C) ANOVA
(D) Chi-square

**4.** What type is snowball sampling ?
(A) Non-probability sampling
(B) Probability sampling
(C) Multi-stage sampling
(D) Random sampling

**5.** Which is the research method predominantly used to study cultural anthropology ?
(A) Interview
(B) Panel discussion
(C) Participant observation
(D) Focus group discussion

**6.** While researching on Dr. U. R. Ananthamurthy, what kind of data are you collecting on the basis of interview with him ?
(A) Secondary data
(B) Primary data
(C) Tertiary data
(D) Filtered data

**7.** 'The post broadcast media' refers to
(A) Folk media
(B) Social media
(C) Print media
(D) Electronic media

**8.** The technique that was used by the Roman Catholic Church in 1622 to propagate the faith came to be known as
(A) Publicity
(B) Religious propagation
(C) Seminary discourse
(D) Propaganda

www.prepp.in

Prepp
Your Personal Exams Guide



**9.** ಸಂವಹನದ ಫಲವಾಗಿ ಸಾರ್ವಜನಿಕ ಅಭಿಪ್ರಾಯ ರೂಢಣೆಯಾಗುವ ಸ್ಥಳ
(A) ಪಬ್ಲಿಕ್ ಡಿಬೇಟ್
(B) ಪಬ್ಲಿಕ್ ಸ್ಟಿಯರ್
(C) ಮೀಡಿಯಾ ಬೈಟ್
(D) ಮೀಡಿಯಾ ಸರ್ಕಲ್

**10.** 'ಬಿಗ್ ಬಾಸ್' ಯಾವುದಕ್ಕೆ ಒಂದು ಉದಾಹರಣೆ ?
(A) ವರ್ಚ್ಯುವಲ್ ಟಿವಿ (B) ಪಬ್ಲಿಕ್ ಟಿವಿ
(C) ರಿಯಾಲಿಟಿ ಟಿವಿ (D) ಈ–ಟಿವಿ

**11.** ಸಂವಹನದಲ್ಲಿ 'ಮೆಥಮೆಟಿಕಲ್ ಮಾದರಿ' ಯಾರ ಹೆಸರಿನಲ್ಲಿದೆ ?
(A) ಆಸ್‌ಗುಡ್ ಮತ್ತು ಶ್ರಾಮ್
(B) ಶಾನನ್ ಮತ್ತು ವೀವರ್
(C) ರೋಜರ್ಸ್ ಮತ್ತು ಡೇನಿಯಲ್ ಲರ್ನರ್
(D) ಎವರೆಟ್ ರೋಜರ್ಸ್

**12.** 'ಕ್ಯಾಟ್ ವಾಕ್' ಎಂಬುದು ಯಾವುದಕ್ಕೆ ಒಂದು ಉದಾಹರಣೆ ?
(A) ವರ್ಬಲ್ ಸಂವಹನ
(B) ಸೈಬರ್‌ನೆಟಿಕ್ಸ್
(C) ಅಂತರ್‌ವ್ಯಕ್ತಿ ಸಂವಹನ
(D) ಕೈನೆಸಿಕ್ಸ್

**13.** ಈ ಕೆಳಗೆ ಎರಡು ಹೇಳಿಕೆಗಳು I ಮತ್ತು II ನ್ನು ಕೊಡಲಾಗಿದೆ ನಂತರ ಅವುಗಳ ನಿರ್ಧಾರಗಳನ್ನು (a) ಮತ್ತು (b) ನೀಡಲಾಗಿದೆ. ಹೇಳಿಕೆಗಳನ್ನು ನೀವು ಸರಿ ಎಂದೇ ಪರಿಗಣಿಸಬೇಕು. ಯಾವ ನಿರ್ಧಾರಗಳು ಹೇಳಿಕೆಗನುಗುಣವಾಗಿ ತರ್ಕಬದ್ಧವಾಗಿವೆ ?
**ಹೇಳಿಕೆಗಳು :**
(I) ಎಲ್ಲಾ ಕಾಡುಗಳು ಆನೆಗಳಾಗಿರುತ್ತವೆ.
(II) ಕೆಲವು ಆನೆಗಳು ಕುದುರೆಗಳಾಗಿರುತ್ತದೆ.
**ನಿರ್ಧಾರಗಳು :**
(a) ಎಲ್ಲಾ ಕುದುರೆಗಳು ಕಾಡುಗಳಾಗಿರುತ್ತವೆ.
(b) ಕೆಲವು ಆನೆಗಳು ಕಾಡುಗಳಾಗಿರುತ್ತವೆ.
(A) ಕೇವಲ ನಿರ್ಧಾರ (a) ಸರಿ
(B) ಕೇವಲ ನಿರ್ಧಾರ (b) ಸರಿ
(C) ನಿರ್ಧಾರ (a) ಅಥವಾ ನಿರ್ಧಾರ (b) ಎರಡೂ ಸರಿಯಿಲ್ಲ
(D) ನಿರ್ಧಾರ(a) ಮತ್ತು ನಿರ್ಧಾರ(b) ಎರಡೂ ಸರಿ

**14.** ಈ ಕೆಳಗಿನ ಪ್ರಶ್ನೆಯಲ್ಲಿ ಒಂದು ಹೇಳಿಕೆಗೆ ಎರಡು ಊಹೆಗಳಿವೆ (i) ಮತ್ತು (ii). ಊಹೆಯೆಂದರೆ ಏನಾದರೂ ಆಗಿರಬೇಕೆಂದುಕೊಳ್ಳುವುದು ಅಥವಾ ಭಾವಿಸುವುದು. ಈ ಕೆಳಗಿನ ಹೇಳಿಕೆ ಮತ್ತು ಊಹೆಗಳನ್ನು ನೋಡಿ, ಯಾವ ಊಹೆ ಹೇಳಿಕೆಯಲ್ಲಿ ಸೂಚ್ಯವಾಗಿದೆಯೆಂದು ತಿಳಿಸಿ.
**ಹೇಳಿಕೆ** : "ನೀವು 15 ಡಿಸೆಂಬರ್‌ರೊಳಗೆ ನಮ್ಮಲ್ಲಿ ದಾಖಲಾದರೆ20% ರಿಯಾಯಿತಿ ಕೊಡಲಾಗುವುದು" – ಇದು ಒಂದು ತರಬೇತಿ ತರಗತಿ ನಡೆಸುವವರ ಜಾಹಿರಾತು.
**ಊಹೆಗಳು :**
(i) ರಿಯಾಯಿತಿ ಪ್ರಸ್ತಾಪವು ಉತ್ತಮ ವಿದ್ಯಾರ್ಥಿಗಳನ್ನು ಆಕರ್ಷಿಸಲು ಕಾರಣವಾಗುತ್ತದೆ.
(ii) ತರಬೇತಿ ಶುಲ್ಕವನ್ನು ಭರಿಸಲು ಸಾಧ್ಯವಾಗದ ವಿದ್ಯಾರ್ಥಿಗಳು ಕೂಡ ಈ ತರಬೇತಿಗೆ ಸೇರಬಹುದು.
(A) ಕೇವಲ ಊಹೆ (i) ಮಾತ್ರ ಸೂಚ್ಯವಾಗಿದೆ
(B) ಕೇವಲ ಊಹೆ (ii) ಮಾತ್ರ ಸೂಚ್ಯವಾಗಿದೆ
(C) ಊಹೆ (i) ಅಥವಾ (ii) ಸಹ ಸೂಚ್ಯವಾಗಿಲ್ಲ
(D) ಎರಡೂ ಊಹೆಗಳು ಸೂಚ್ಯವಾಗಿವೆ

**15.** ಈ ಕೆಳಗಿನ ಪ್ರಶ್ನೆಯಲ್ಲಿ, ಎರಡು ವಾದಗಳನ್ನು (i) ಮತ್ತು (ii)ನ್ನು ಕೊಡಲಾಗಿದೆ. ಯಾವ ವಾದ "ಪ್ರಬಲವಾಗಿದೆ" ಮತ್ತು ಯಾವ ವಾದ "ದುರ್ಬಲವಾಗಿದೆ " ಎಂದು ನಿರ್ಧರಿಸಿ. ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
**ಹೇಳಿಕೆ** : ರಾಷ್ಟ್ರೀಯ ನಾಯಕರು ಮರಣ ಹೊಂದಿದ್ದಾಗ ಸಾರ್ವಜನಿಕ ರಜಾ ದಿನಗಳೆಂದು ಘೋಷಣೆ ಮಾಡಬೇಕೆ ?
**ವಾದಗಳು :**
(i) ಇಲ್ಲ, ಅಂತಹ ಅನಿಗದಿತ ರಜಾ ರಾಷ್ಟ್ರೀಯ ಪ್ರಗತಿ ಕುಂಠಿತಗೊಳಿಸುವುದು.
(ii) ಹೌದು, ಜನರು ಅಗಲಿದ ಆತ್ಮಕ್ಕೆ ತಮ್ಮ ಗೌರವಾರ್ಪಣೆ ಸಲ್ಲಿಸಲು ಇಚ್ಛಿಸುತ್ತಾರೆ.
(A) ಕೇವಲ ವಾದ (i) ಪ್ರಬಲವಾಗಿದೆ
(B) ಕೇವಲ ವಾದ (ii) ಪ್ರಬಲವಾಗಿದೆ
(C) ವಾದ (i) ಅಥವಾ ವಾದ (ii) ಪ್ರಬಲವಾಗಿಲ್ಲ
(D) ಎರಡು ವಾದಗಳು ಪ್ರಬಲವಾಗಿದೆ

**9.** The place where public opinions are formed as a result of communication
(A) Public debate
(B) Public sphere
(C) Media byte
(D) Media circle

**10.** 'Big Boss' is an example for
(A) Virtual TV (B) Public TV
(C) Reality TV (D) e-TV

**11.** 'Mathematical model' in communication is credited to
(A) Osgood and Schramm
(B) Shannon and Weaver
(C) Rogers and Daniel Learner
(D) Everette Rogers

**12.** 'Cat Walk' is a fine example for
(A) Verbal communication
(B) Cybernetics
(C) Interpersonal communication
(D) Kinesics

**13.** Two statements I and II given below are followed by two conclusions (a) and (b). You have to consider the statements are true. Which of the given conclusions logically follows from the given statements ?

**Statements :**
(I) All jungles are Elephants.
(II) Some Elephants are horses.

**Conclusions :**
(a) All horses are jungles.
(b) Some Elephants are jungles.
(A) Only conclusion (a) follows
(B) Only conclusion (b) follows
(C) Neither conclusion (a) nor conclusion (b) follows
(D) Both conclusion (a) and (b) follow

**14.** In the following question a statement is followed by two assumptions (i) and (ii). An assumption is something supposed or taken for granted. Consider the statement and the following assumptions and decide which of the following assumptions is implicit in the statement ?

**Statement :** "Enroll with us before $15^{th}$ December to get the advantage of our 20% discount offer", an advertisement by a coaching class.

**Assumptions :**
(i) Discount offer is bound to attract good students as well.
(ii) Even those students who cannot afford to pay the fees of coaching classes may join this class.
(A) Only assumption (i) is implicit
(B) Only assumption (ii) is implicit
(C) Neither assumption (i) nor (ii) is implicit
(D) Both the assumptions are implicit

**15.** The question below is followed by two arguments (i) and (ii). Decide which of the arguments is "strong" and which is "weak". Choose the correct answer from the given below.

**Statement :** Should public holidays be declared on demise of important national leaders ?

**Arguments :**
(i) No, such unscheduled holiday hamper the national progress.
(ii) Yes, people would like to pay their homage to the departed soul.
(A) Only the argument (i) is strong
(B) Only the argument (ii) is strong
(C) Neither argument (i) nor argument (ii) is strong
(D) Both the arguments are strong

**16.** ಈ ಕೆಳಗಿನ ನಾಲ್ಕು (A – D) ಪದಗಳಲ್ಲಿ, ಒಂದು ಭಿನ್ನವಾಗಿದೆ. ಅದು ಯಾವುದೆಂದು ಗುರುತಿಸಿ.
(A) ಕಲಸು ಮಣ್ಣು
(B) ಹೂಳು
(C) ಮಡಿಕೆ ಮಾಡುವ ಮಣ್ಣು
(D) ಮರಳು

**17.** ಮೇಲ್ತುದಿಯಲ್ಲಿ ಕೊಟ್ಟ ಜೋಡಿ ಪದಗಳಿಗಿರುವ ಸಂಬಂಧವನ್ನೇ ಹೊಂದಿದ ಪದಗಳ ಜೋಡಿಯನ್ನು ಆರಿಸಿ.
ಪಿಂಜಿ : ನೂಲು
(A) ಹಿಂಡು : ನಿಂಬೆ
(B) ಬೆಂಕಿ : ಕಲ್ಲಿದ್ದಲು
(C) ರೀಮ್ : ಕಾಗದ
(D) ಮರ : ಮರದ ದಿಮ್ಮಿ

**18.** ಈ ಕೆಳಗಿನ ಹೇಳಿಕೆಗೆ ತಿರುಗುಮುರುಗಾದ ಅರ್ಥ ಕೊಡುವ ವಾಕ್ಯ ಯಾವುದು ?
"ಹಿಮ ಬಿದ್ದರೆ ಆಗ ಸ್ಕೀಟರ್ ಸ್ವೆಟರ್ ಧರಿಸುತ್ತಾನೆ."
(A) ಸ್ಕೀಟರ್ ಸ್ವೆಟರ್ ಧರಿಸಿದ್ದರೆ ಆಗ ಹಿಮ ಬೀಳುತ್ತದೆ.
(B) ಸ್ಕೀಟರ್ ಸ್ವೆಟರ್ ಧರಿಸದಿದ್ದರೆ, ಆಗ ಹಿಮ ಬೀಳುತ್ತಿರಲಿಲ್ಲ.
(C) ಈಗ ಹಿಮ ಬೀಳುತ್ತಿಲ್ಲವೆಂದರೆ, ಆಗ ಸ್ಕೀಟರ್ ಸ್ವೆಟರ್ ಧರಿಸುವುದಿಲ್ಲ.
(D) ಹಿಮ ಬೀಳುತ್ತಿಲ್ಲವೆಂದರೆ ಆಗ ಸ್ಕೀಟರ್ ಸ್ವೆಟರ್ ಧರಿಸುತ್ತಾನೆ.

**19.** ಮಾಹಿತಿಯ ಒಂದು ಪ್ರಮಾಣ ಯಾವುದು ?
(A) ಬಿಟ್ (Bit)
(B) ಬೈಟ್ (Bite)
(C) ಗ್ರಾಂ (Gram)
(D) ಹರ್ಟ್ಸ್ (Hertz)

**20.** ಈ ಕೆಳಗಿನವುಗಳಲ್ಲಿ ಯಾವುದು ಎಂ. ಎಸ್. ಆಫೀಸ್‌ನ ಕ್ರಮಬದ್ಧ ಆವೃತ್ತಿಯಲ್ಲ ?
(A) ಆಫೀಸ್ ಎಕ್ಸ್‌ಪಿ (B) ಆಫೀಸ್ ವಿಸ್ಟಾ
(C) ಆಫೀಸ್ 2007 (D) ಆಫೀಸ್ 2010

**21.** ಇ.ಆರ್.ಪಿ. (ERP) ಯು ಯಾವುದರ ಸಂಕ್ಷಿಪ್ತ ರೂಪವಾಗಿದೆ ?
(A) ಎಂಟರ್‌ಪ್ರೈಸ್ ರಿಟೈರ್‌ಮೆಂಟ್ ಪ್ಲ್ಯಾನಿಂಗ್
(B) ಎಂಟರ್‌ಪ್ರೈಸ್ ರಿಲೇಷನ್‌ಶಿಪ್ ಪ್ಲ್ಯಾನಿಂಗ್
(C) ಎಂಟರ್‌ಪ್ರೈಸ್ ರಿಸೋರ್ಸ್ ಪ್ಲ್ಯಾನಿಂಗ್
(D) ಎಂಟರ್‌ಪ್ರೈಸ್ ರೀ-ಆರ್ಡರ್ ಪ್ಲ್ಯಾನಿಂಗ್

**22.** ಟ್ರೋಜಾನ್ ಹಾರ್ಸ್ ಒಂದು
(A) ಮೈಕ್ರೋಸಾಫ್ಟ್ ವರ್ಡ್ ಒಳಗಡೆ ಕಾರ್ಯಗಳನ್ನು ಒದಗಿಸುವ ಒಂದು ಸಾಫ್ಟ್‌ವೇರ್ ಪ್ರೋಗ್ರಾಂ
(B) ಕಂಪ್ಯೂಟರ್ ವೈರಸ್‌ನ್ನು ಪತ್ತೆ ಹಚ್ಚಲು ವಿನ್ಯಾಸಗೊಳಿಸಿರುವ ಒಂದು ಸಾಫ್ಟ್‌ವೇರ್ ಪ್ರೋಗ್ರಾಂ
(C) ಒಂದು ಮಾಹಿತಿ ವ್ಯವಸ್ಥೆಯ ಗುಣಮಟ್ಟ ಹೆಚ್ಚಿಸಲು ವಿನ್ಯಾಸಗೊಳಿಸಿರುವ ಒಂದು ಅಪ್ಲಿಕೇಷನ್ ಸಾಫ್ಟ್‌ವೇರ್
(D) ಮೇಲ್ನೋಟಕ್ಕೆ ಕಾನೂನುಬದ್ಧವಾಗಿ ಕಾಣಿಸಿ, ಆಂತರ್ಯದಲ್ಲಿ ಹಾನಿಮಾಡುವ ಕಾರ್ಯಗಳನ್ನೊಳಗೊಂಡ ಒಂದು ಸಾಫ್ಟ್‌ವೇರ್ ಪ್ರೋಗ್ರಾಂ

**23.** ಬೈನರಿ ಪದ್ಧತಿಯು ಯಾವ ಸಂಖ್ಯೆಗಳನ್ನು ಮಾತ್ರ ಬಳಸುತ್ತದೆ ?
(A) 1 ಮತ್ತು 2 (B) 0 ಮತ್ತು 1
(C) 2 ಮತ್ತು 3 (D) 3 ಮತ್ತು 4

**24.** ಒಂದೇ ಸಮಯದಲ್ಲಿ ಒಂದಕ್ಕಿಂತ ಹೆಚ್ಚು ಅಪ್ಲಿಕೇಷನ್‌ನ್ನು ಚಲಾಯಿಸಬಲ್ಲ ಒಂದು ಆಪರೇಟಿಂಗ್ ಸಿಸ್ಟಂನ ಸಾಮರ್ಥ್ಯವನ್ನು ________ ಎಂದು ಕರೆಯುತ್ತಾರೆ.
(A) ಮಲ್ಟಿ-ಯೂಸರ್ ಕಂಪ್ಯೂಟಿಂಗ್
(B) ಮಲ್ಟಿ-ಟಾಸ್ಕಿಂಗ್
(C) ಟೈಮ್-ಶೇರಿಂಗ್
(D) ಆಬ್ಜೆಕ್ಟ್ ಓರಿಯೆಂಟೆಡ್ ಪ್ರೋಗ್ರಾಂಮಿಂಗ್

www.prepp.in

Prepp
Your Personal Exams Guide



**16.** Among the four terms marked A – D, three terms are similar and one is dissimilar. Find the one that is not similar.

(A) Loamy soil

(B) Silt

(C) Clayey soil

(D) Sandy soil

**17.** Choose the pair of words which shows the same relationship as given at the top.

Skein : Yarn

(A) Squeeze : Lemon

(B) Fire : Coal

(C) Ream : Paper

(D) Tree : Lumber

**18.** Which statement represents the inverse of the statement "If it is snowing, then skeeter wears a sweater" ?

(A) If skeeter wear a sweater, then it is snowing.

(B) If skeeter does not wear a sweater, then it is not snowing.

(C) If it is not snowing, then skeeter does not wear a sweater.

(D) If it is not snowing, then skeeter wears a sweater.

**19.** What is a unit of information ?

(A) Bit

(B) Bite

(C) Gram

(D) Hertz

**20.** Which of the following is not a valid version of MS-Office ?

(A) Office XP (B) Office Vista

(C) Office 2007 (D) Office 2010

**21.** ERP is an acronym for

(A) Enterprise Retirement Planning

(B) Enterprise Relationship Planning

(C) Enterprise Resource Planning

(D) Enterprise Re-order Planning

**22.** Trojan horse is

(A) A software programme which provides functions within Microsoft Word

(B) A software programme designed to detect computer virus

(C) An application software designed to enhance the quality of an information system

(D) A software programme that appears legitimate but contain hidden function that cause damage

**23.** Binary system of numbers uses only

(A) 1 and 2 (B) 0 and 1

(C) 2 and 3 (D) 3 and 4

**24.** The ability of an operating system to run more than one application at a time is called

(A) Multi-user computing

(B) Multi-tasking

(C) Time-sharing

(D) Object oriented programming

**25.** NAAC ನ ಪ್ರಧಾನ ಕಛೇರಿ ಎಲ್ಲಿದೆ ?
(A) ನವದೆಹಲಿ
(B) ಚೆನ್ನೈ
(C) ಕೊಲ್ಕೊತಾ
(D) ಬೆಂಗಳೂರು

**26.** ICHR ನ ಈಗಿನ ನಿರ್ದೇಶಕರು ಯಾರು ?
(A) ಸ. ಶೆಟ್ಟರು
(B) ಎಲ್ಲಪ್ರಗಡ ಸುದರ್ಶನ ರಾವ್
(C) ರಾಮಚಂದ್ರ ಗುಹಾ
(D) ಶೇಖ್ ಅಲಿ

**27.** ಮಧ್ಯಪ್ರದೇಶದ ಅಮರಕಂಟಕದಲ್ಲಿ ಸ್ಥಾಪನೆಗೊಂಡಿರುವ ರಾಷ್ಟ್ರೀಯ ವಿಶ್ವವಿದ್ಯಾಲಯವನ್ನು ಹೆಸರಿಸಿ.
(A) ಇಂದಿರಾ ಗಾಂಧಿ ರಾಷ್ಟ್ರೀಯ ಕಾನೂನಿ ವಿ. ವಿ.
(B) ಇಂದಿರಾ ಗಾಂಧಿ ರಾಷ್ಟ್ರೀಯ ಮಹಿಳಾ ವಿ. ವಿ.
(C) ಇಂದಿರಾ ಗಾಂಧಿ ರಾಷ್ಟ್ರೀಯ ಬುಡಕಟ್ಟು ವಿ. ವಿ.
(D) ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿ. ವಿ.

**28.** ಜಗತ್ತಿನ ಮೊದಲ ಆವಾಸಿಕ ಅಂತರಾಷ್ಟ್ರೀಯ ವಿಶ್ವವಿದ್ಯಾನಿಲಯವೆಂದು ಯಾವುದನ್ನು ಗುರುತಿಸುತ್ತಾರೆ ?
(A) ಮಗಧ ವಿ. ವಿ.
(B) ನಲಂದಾ ವಿ. ವಿ.
(C) ವಿಕ್ರಮಶಿಲಾ ವಿ. ವಿ.
(D) ತಕ್ಷಶಿಲಾ ವಿ. ವಿ.

**29.** 'ಸಮುದಾಯ ಕಾಲೇಜು ಯೋಜನೆ' ಯಾವುದಕ್ಕೆ ಸಂಬಂಧಿಸಿದ್ದು ?
(A) ತಾಂತ್ರಿಕ ಶಿಕ್ಷಣ
(B) ಸಾಮಾನ್ಯ ಶಿಕ್ಷಣ
(C) ವ್ಯಕ್ತಿ ಆಧಾರಿತ ಶಿಕ್ಷಣ
(D) ವಯಸ್ಕರ ಶಿಕ್ಷಣ

**30.** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (IIAS) ಎಲ್ಲಿದೆ ?
(A) ನವದೆಹಲಿ
(B) ಬೆಂಗಳೂರು
(C) ಹೈದರಾಬಾದ್
(D) ಶಿಮ್ಲಾ

ಕೆಳಗಿನ ಪ್ಯಾಸೇಜ್‌ನಲ್ಲಿ ಯು.ಎಸ್.ಎ. ಯಲ್ಲಿ ಪ್ರಜಾಪ್ರಭುತ್ವದ ಕಾರ್ಯಭಾರದ ಬಗೆಗೆ ನೋವಮ್ ಕೋಮ್‌ಸ್ಕಿ ತನ್ನ ಅಭಿಪ್ರಾಯವನ್ನು ನೀಡಿದ್ದಾರೆ. ಪ್ಯಾಸೇಜನ್ನು ಓದಿ **31** ರಿಂದ **36** ರ ತನಕದ ಪ್ರಶ್ನೆಗಳನ್ನು ಉತ್ತರಿಸಿರಿ.

1945 ರಲ್ಲಿ ಉತ್ತುಂಗದಲ್ಲಿದ್ದಲ್ಲಿಂದ ಅಮೇರಿಕದ ಅಧಿಕಾರದ ಶಕ್ತಿ ಕಡಿಮೆಯಾಗುತ್ತಿದೆ. ಆದರೂ ಅದು ಇನ್ನೂ ಹೋಲಿಸಲಾಗದ್ದು. ಮತ್ತು ಅದು ಅಪಾಯಕಾರಿ. ಒಬಾಮಾರವರ ಗಮನಾರ್ಹ ವಿಶ್ವಭಯೋತ್ಪಾದನಾ ಕಾರ್ಯಾಚರಣೆ ಮತ್ತು ಅದಕ್ಕೆ ಪಶ್ಚಿಮದಲ್ಲಿ ಸೀಮಿತವಾದ, ಮರುಕ ಹುಟ್ಟಿಸುವ ಪ್ರತಿಕ್ರಿಯೆ ಒಂದು ಆಘಾತ ಉಂಟುಮಾಡುವ ನಿದರ್ಶನ. ಮತ್ತು ಅದು ಪ್ರಪಂಚದಲ್ಲೇ ಅತ್ಯಂತ ವಿಪರೀತವಾದ – ಅಂತರರಾಷ್ಟ್ರೀಯ ಭಯೋತ್ಪಾದನೆಯ ಕಾರ್ಯಾಚರಣೆಯಾಗಿದೆ.

ಸ್ವೀಕೃತ ಸಿದ್ಧಾಂತ ಪ್ರಕಾರ, ಕೆಲವು ದೋಷಗಳಿದ್ದರೂ, ಅತ್ಯುತ್ತಮವಾದ ಸಾಧ್ಯವಿರುವ ವ್ಯವಸ್ಥೆಯಾದ, ಬಂಡವಾಳ (ಶ್ರೀಮಂತ) ಪ್ರಜಾಪ್ರಭುತ್ವಗಳಲ್ಲಿ ನಾವಿಂದು ಜೀವಿಸುತ್ತೇವೆ. ಬಂಡವಾಳಶಾಹಿ ಮತ್ತು ಪ್ರಜಾಪ್ರಭುತ್ವದ ನಡುವಿನ ಸಂಬಂಧದ ಕುರಿತು, ಉದಾಹರಣೆಗೆ, ಅವುಗಳು ಇನ್ನೂ ಸುಸಂಗತವೇ ?, ಎಂಬುದರ ಬಗ್ಗೆ ಹಲವು ವರ್ಷಗಳಿಂದ ಸ್ವಾರಸ್ಯಕರ ಚರ್ಚೆ ನಡೆಯುತ್ತಲೇ ಇದೆ. ನಾನು ಇದನ್ನು ಮುಂದುವರಿಸುತ್ತಿಲ್ಲ, ಏಕೆಂದರೆ ನಾನು ಬೇರೆಯೇ ಆದ ವ್ಯವಸ್ಥೆಯನ್ನು ಚರ್ಚಿಸಲು ಇಚ್ಛಿಸುತ್ತೇನೆ – ನಾವು ಅದನ್ನು "ನಿಜವಾಗಿ ಅಸ್ತಿತ್ವದಲ್ಲಿರುವ ಶ್ರೀಮಂತ ಪ್ರಜಾಪ್ರಭುತ್ವ" ಚುಟುಕಾಗಿ ಆರ್.ಇ.ಸಿ.ಡಿ., ಆಕಸ್ಮಿಕವಾಗಿ "wrecked" ಎಂದು ಉಚ್ಚರಿಸಲ್ಪಟ್ಟದ್ದೆಂದು

**25.** The Head quarters of NAAC is situated in
(A) New Delhi
(B) Chennai
(C) Kolkata
(D) Bengaluru

**26.** The present Chairman of ICHR
(A) Sa. Shettar
(B) Ellapragada Sudershan Rao
(C) Ramachandra Guha
(D) Sheikh Ali

**27.** In Amarakantak, MP, a national University is established. Name it.
(A) Indira Gandhi National Law University
(B) Indira Gandhi National Women's University
(C) Indira Gandhi National Tribal University
(D) Indira Gandhi National Open University

**28.** The first known residential International University of the world is
(A) Magadh University
(B) Nalanda University
(C) Vikramashila University
(D) Takshashila University

**29.** 'Community Colleges' scheme concentrates on
(A) Technical education
(B) General education
(C) Vocational education
(D) Adult education

**30.** Indian Institute of Advanced Studies is located at
(A) New Delhi
(B) Bengaluru
(C) Hyderabad
(D) Shimla

Noam Chomsky has presented his views on the functioning of democracy in USA in the following passage. Read the passage and answer questions **31-36** :

American power is diminishing, as it has been in fact since its peak in 1945, but it's still incomparable. And it's dangerous. Obama's remarkable global terror campaign and the limited, pathetic reaction to it in the West is one shocking example. And it is a campaign of international terrorism – by far the most extreme in the world.

According to received doctrine, we live in capitalist democracies, which are the best possible system, despite some flaws. There's has been an interesting debate over the years about the relation between capitalism and democracy, for example, are they even compatible ? I won't be pursuing this because I'd like to discuss a different system – what we could call the "really existing capitalist democracy", RECD for short, pronounced

ಕರೆಯುತ್ತೇವೆ. ಪ್ರಾರಂಭದಲ್ಲಿ , ಆರ್. ಇ. ಸಿ. ಡಿ., ಪ್ರಜಾಪ್ರಭುತ್ವದೊಂದಿಗೆ ಹೇಗೆ ಹೋಲುತ್ತದೆ ? ಸರಿ, ಅದು ಪ್ರಜಾಪ್ರಭುತ್ವ ಅಂದರೆ ನಮಗೇನು ಅರ್ಥವಾಗುತ್ತದೆ ಎಂಬುದನ್ನು ಅವಲಂಬಿಸಿದೆ. ಇದಕ್ಕೆ ಅನೇಕ ಹೇಳಿಕೆಗಳಿವೆ. ಒಂದು, ಒಂದು ತರದ ಸ್ವೀಕೃತ ಹೇಳಿಕೆ. ಅದು ಒಬಾಮಾ ವೈವಿಧ್ಯದ, ಮೇಲಕ್ಕೆ ಏರುತ್ತಿರುವ ಭಾಷಣ ಕಲೆ, ದೇಶಭಕ್ತಿಯ ಭಾಷಣಗಳು, ಶಾಲೆಯಲ್ಲಿ ಮಕ್ಕಳಿಗೆ ಕಲಿಸುತ್ತಿದ್ದದ್ದು, ಇತ್ಯಾದಿ ಇತ್ಯಾದಿ. ಯು. ಎಸ್. ಹೇಳಿಕೆಯಲ್ಲಿ, ಇದು "ಜನರ, ಜನರಿಂದ, ಜನರಿಗಾಗಿ ಇರುವ ಸರಕಾರ" ಮತ್ತು ಅದನ್ನು ಆರ್.ಇ.ಸಿ.ಡಿ. ಯೊಂದಿಗೆ ಹೋಲಿಸುವುದು ಬಹಳ ಸುಲಭ.

ಯುನೈಟೆಡ್ ಸ್ಟೇಟ್ಸ್‌ನಲ್ಲಿ ಶೈಕ್ಷಣಿಕ ರಾಜ್ಯಶಾಸ್ತ್ರದ ಮುಖ್ಯ ವಿಷಯಗಳಲ್ಲಿ ಒಂದು "ಮನೋಭಾವಗಳು ಮತ್ತು ಧೋರಣೆ ಮತ್ತು ಅವುಗಳ ಸಹಸಂಬಂಧ "ದ ಅಧ್ಯಯನವಾಗಿದೆ. ಯುನೈಟೆಡ್ ಸ್ಟೇಟ್ಸ್ ನಲ್ಲಿ ಮನೋಭಾವಗಳ ಅಧ್ಯಯನ ನ್ಯಾಯವಾಗಿ ಸುಲಭ. ಹೆಚ್ಚು ಮತದಾನ ಮಾಡುವ ಸಮಾಜ, ಬಹಳಷ್ಟು ಗಂಭೀರ ಮತ್ತು ನಿಖರ ಮತದಾನಗಳು, ನೀವು ನೋಡಬಹುದಾದ ಧೋರಣೆಗಳು, ಮತ್ತು ಅವುಗಳನ್ನು ನೀವು ಹೋಲಿಸಬಹುದು. ಮತ್ತು ಫಲಿತಾಂಶಗಳು ಕುತೂಹಲಕರವಾಗಿರುತ್ತದೆ. ಈ ಕೆಲಸದಲ್ಲಿ, ಅಗತ್ಯವಾಗಿ ಚಿನ್ನದ ಮಟ್ಟದ ಕ್ಷೇತ್ರದಲ್ಲಿ , 70% ಕೆಳಗೆ ಆಸ್ತಿ / ಆದಾಯ ಅಳತೆಯ ಮೇಲೆ , ಸ್ಥೂಲವಾಗಿ 70% ಜನಸಂಖ್ಯೆಗೆ ಧೋರಣೆ ಮೇಲೆ ಯಾವ ಪ್ರಭಾವವೂ ಇಲ್ಲ, ಅವರು ಪರಿಣಾಮಕಾರಿಯಾಗಿ ಮತದಾನದ ಹಕ್ಕು ಕಸಿಯಲ್ಪಟ್ಟವರು. ನೀವು ಸಂಪತ್ತು / ಆದಾಯದ ಏಣಿ ಹತ್ತುತ್ತಿದ್ದಂತೆ, ನಿಮಗೆ ಧೋರಣೆಯ ಮೇಲೆ ಸ್ವಲ್ಪ ಹೆಚ್ಚು ಪ್ರಭಾವ ಸಿಗುತ್ತದೆ. ನೀವು ಮೇಲ್ತುದಿಗೆ ಹೋದಂತೆ, ಅಂಥವರು ಸುಮಾರು ಪ್ರತಿಶತ ಒಂದರ ಹತ್ತನೇ ಒಂದು ಇರಬಹುದು, ನಿಮಗೆ ಬೇಕಾದ್ದನ್ನು ಪಡೆಯಬಹುದು. ಅಂದರೆ ಅಂತವರು ಧೋರಣೆ ನಿರ್ಧರಿಸುತ್ತಾರೆ. ಆದ್ದರಿಂದ ಅದಕ್ಕೆ ಸೂಕ್ತ ಪದ ಪ್ರಜಾಪ್ರಭುತ್ವ ಅಲ್ಲ, ಅದು ಶ್ರೀಮಂತರ ಪ್ರಭುತ್ವ.

ಈ ಆರ್. ಇ. ಸಿ. ಡಿ.ಯ ಲಕ್ಷಣಗಳು ಎಲ್ಲ ಹೊತ್ತಿನಲ್ಲೂ ಕಾಣುತ್ತವೆ. ಆದುದರಿಂದ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಪ್ರಧಾನ ಗೃಹಕೃತ್ಯದ ವಿಷಯವು ಸಾರ್ವಜನಿಕರಿಗೆ ಉದ್ಯೋಗವಾಗಿದೆ. ಮತದಾನ ಇದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಆದುದರಿಂದ, ಹೆಚ್ಚು ಶ್ರೀಮಂತ ಮತ್ತು ಹಣಕಾಸಿನ ಸಂಸ್ಥೆಗಳಿಗೆ ಪ್ರಧಾನ ವಿವಾದಾಂಶ ಯಾವುದೆಂದರೆ ಕೊರತೆ/ ಖೋತಾ. ಸರಿ, ಧೋರಣೆ ಬಗ್ಗೆ ಏನು ? ಈಗ ಸಂಯುಕ್ತ ರಾಜ್ಯದಲ್ಲಿ ಪ್ರತ್ಯೇಕವಾದ ಪರಿಸ್ಥಿತಿ ಇದೆ, ನಿಧಿಗಳಲ್ಲಿ ಸಾಕಷ್ಟು ಕಡಿತ ಮಾಡಲಾಗುತ್ತಿದೆ. ಇದು ಉದ್ಯೋಗಗಳಿಂದಲೋ ಅಥವಾ ಕೊರತೆಯಿಂದಾಗಿಯೋ ? ಕೊರತೆಯಿಂದಾಗಿಯೇ.

ಪ್ರಾಸಂಗಿಕವಾಗಿ ಯುರೋಪ್ ಇನ್ನೂ ಕೆಟ್ಟದ್ದಾಗಿದೆ – ಎಷ್ಟು ವಿಲಕ್ಷಣವಾಗಿದೆ ಎಂದರೆ ವಾಲ್‌ಸ್ಟ್ರೀಟ್ ಜರ್ನಲ್, ಯುರೋಪ್‌ನಲ್ಲಿ ಪ್ರಜಾಪ್ರಭುತ್ವ ಕಣ್ಮರೆಯಾದುದರಿಂದ, ದಿಗಿಲುಗೊಂಡಿದೆ. ".... ಒಂದರ ನಂತರ ಒಂದು ಚುನಾವಣಾ ಸೋಲಿನ ನಂತರವೂ ಪ್ರತಿಕ್ರಿಯೆಯಾಗಿ ಆರ್ಥಿಕ ಧೋರಣೆಯಲ್ಲಿ ಆಗಬೇಕಾದ ಬದಲಾವಣೆ ಆಗಿಲ್ಲ. ಬಲ ಪಂಥವನ್ನು ಎಡ ಪಂಥವು ಸ್ಥಾನ ಪಲ್ಲಟಗೊಳಿಸಿದೆ, ಬಲ ಪಂಥವು ಎಡ ಪಂಥವನ್ನು ಹೊರಹಾಕಿದೆ. ಸಿಪ್ರಸ್‌ನಲ್ಲಿ ಕೇಂದ್ರ-ಬಲ ಕಮ್ಯುನಿಷ್ಟರನ್ನು ಸದೆ ಬಡೆದಿದೆ. ಆದರೂ ಆರ್ಥಿಕ ಧೋರಣೆ ಇದ್ದಂತೆಯೇ ಇದೆ. ಸರಕಾರಗಳು ಖರ್ಚು ಕಡಿಮೆ ಮಾಡಿ ತೆರಿಗೆ ಹೆಚ್ಚಿಸುತ್ತಿವೆ." ಜನರು ಏನೇ ಯೋಚಿಸಲು ಚಿಂತೆ ಇಲ್ಲ ಮತ್ತು "ರಾಷ್ಟ್ರೀಯ ಸರಕಾರಗಳು ಯುರೋಪಿಯನ್ ಆಯೋಗ ನಿರ್ಧರಿಸಿದ ಬೃಹದಾರ್ಥಿಕ ನಿರ್ದೇಶನಗಳನ್ನು ಅನುಸರಿಸಲೇ ಬೇಕು." ಚುನಾವಣೆಗಳು ಹತ್ತಿರ ಹತ್ತಿರ ಅರ್ಥಹೀನವಾಗುತ್ತಿವೆ. ಹೆಚ್ಚಿನಂಶ ತೃತೀಯ ಜಗತ್ತಿನಲ್ಲಿದ್ದಂತೆ

"wrecked" by accident. To begin with, how does RECD compare with democracy ? Well that depends on what we mean by "democracy". There are several versions of this. One, there is a kind of received version. It's soaring rhetoric of the Obama variety, patriotic speeches, what children are taught in school, and so on. In the U.S. version, it's government "of, by and for the people". And it's quite easy to compare that with RECD.

In the United States, one of the main topics of academic political science is the study of attitudes and policy and their correlation. The study of attitudes is reasonably easy in the United States : heavily-polled society, pretty serious and accurate polls, and policy you can see, and you can compare them. And the results are interesting. In the work that's essentially the gold standard in the field, it's concluded that for roughly 70% of the population – the lower 70% on the wealth/income scale – they have no influence on policy whatsoever. They're effectively disenfranchised. As you move up the wealth/income ladder, you get a little bit more influence on policy. When you get to the top, which is may be a tenth of one percent, people essentially get what they want, i.e. they determine the policy. So the proper term for that is not democracy : it's plutocracy.

These characteristics of RECD show up all the time. So the major domestic issue in the United States for the public is jobs. Polls show that very clearly. For the very wealthy and the financial institutions, the major issue is the deficit. Well, what about policy ? There's now a sequester in the United States, a sharp cutback in funds. Is that because of jobs or is it because of the deficit ? Well, the deficit.

Europe, incidentally, is much worse – so outlandish that even The Wall Street Journal has been appalled by the disappearance of democracy in Europe. " ..... Economic policies have changed little in response to one electoral defeat after another. The left has replaced the right; the right has ousted the left. Even the center-right trounced Communists (in Cyprus) – but the economic policies have essentially remained the same : Governments will continue to cut spending and raise taxes." It doesn't matter what people think and "national governments must follow macro-economic directives set by the

Prepp
Your Personal Exams Guide



ಅವು ಅಂತರರಾಷ್ಟ್ರೀಯ ಹಣಕಾಸಿನ ಸಂಸ್ಥೆಗಳಿಂದ ಆಳಲ್ಪಡುತ್ತಿವೆ. ಅದೇ ಯುರೋಪ್ ತಾನು ಹಾಗಾಗಬೇಕೆಂದು ಆಯ್ಕೆ ಮಾಡಿಕೊಂಡಿದೆ. ಅದು ಕೂಡದು.

ಸಂಯುಕ್ತ ರಾಜ್ಯಕ್ಕೆ ಹಿಂತಿರುಗಿದರೆ, ಪರಿಸ್ಥಿತಿ ಅಷ್ಟೊಂದು ಕೆಟ್ಟದಿಲ್ಲವಾದರೂ, ಬಹಳಷ್ಟು ವಿವಾದಾಂಶಗಳಲ್ಲಿ ಸಾರ್ವಜನಿಕ ಅಭಿಪ್ರಾಯ ಮತ್ತು ಧೋರಣೆಗಳ ನಡುವೆ ಅದೇ ತಾರತಮ್ಯ ಇದೆ. ಉದಾಹರಣೆಗೆ ರಾಷ್ಟ್ರೀಯ ಆರೋಗ್ಯಪಾಲನೆ. ನಿಮಗೆ ತಿಳಿದಂತೆ ಯು. ಎಸ್. ನ ಆರೋಗ್ಯ ವ್ಯವಸ್ಥೆ, ಅಂತರರಾಷ್ಟ್ರೀಯ ಲಜ್ಜಾಹೀನ ಹಗರಣವಾಗಿದೆ. ಅದು ಇತರ ಒ. ಇ. ಸಿ. ಡಿ. ದೇಶಗಳ ಪರ್ ಕ್ಯಾಪಿಟ ವೆಚ್ಚದ ಎರಡರಷ್ಟಿದೆ. ಮತ್ತು ತುಲನಾತ್ಮಕವಾಗಿ ಕಡಿಮೆ ಫಲಿತಾಂಶ ಹೊಂದಿದೆ.

ಇದು ಒಂದೇ ಒಂದು ಖಾಸಗೀಕರಣಗೊಳಿಸಲ್ಪಟ್ಟ ಬಹಳಷ್ಟು ನಿಯಂತ್ರಣರಹಿತ ವ್ಯವಸ್ಥೆ. ಸಾರ್ವಜನಿಕರು ಇದನ್ನು ಮೆಚ್ಚುತ್ತಿಲ್ಲ. ಅವರು ಬಹಳ ವರ್ಷಗಳಿಂದ ರಾಷ್ಟ್ರೀಯ ಆರೋಗ್ಯ ಪಾಲನೆ, ಸಾರ್ವಜನಿಕ ಆಯ್ಕೆಗಳನ್ನು ಕೇಳುತ್ತಲೇ ಇದ್ದಾರೆ. ಆದರೆ ಹಣಕಾಸಿನ ಸಂಸ್ಥೆಗಳು ಅದು ಸರಿಯಾಗಿದೆ ಎಂದು ತಿಳಿದಿದ್ದಾರೆ. ಆದ್ದರಿಂದ ಇದು ನಿಲ್ಲುತ್ತದೆ : ಸ್ಥಿರವಾಗುತ್ತದೆ. ನಿಜ ಹೇಳಬೇಕೆಂದರೆ ಸಂಯುಕ್ತ ರಾಜ್ಯದಲ್ಲಿ ಅದೇ ತರದ ದೇಶಗಳಲ್ಲಿದ್ದಂತ ಆರೋಗ್ಯಪಾಲನೆ ವ್ಯವಸ್ಥೆ ಇರುತ್ತಿದ್ದರೆ, ಅಲ್ಲಿ ಕೊರತೆಯೇ ಇರುತ್ತಿರಲಿಲ್ಲ. ಖ್ಯಾತ ಕೊರತೆ ಅಳಿಸಿ ಹೋಗುತ್ತದೆ, ಏನೇ ಆದರೂ ಅದು ಅಷ್ಟೊಂದು ಅನಿಸುವುದೇ ಇಲ್ಲ.

**31.** ಬಂಡವಾಳಶಾಹಿ ಪ್ರಜಾಪ್ರಭುತ್ವದ ಬಗ್ಗೆ ಚಾಮ್‌ಸ್ಕಿಯವರ ಅಭಿಪ್ರಾಯವೇನು ?

(A) ಬೆಂಬಲಿಸಿಲ್ಲ

(B) ಬೆಂಬಲಿಸುತ್ತಾರೆ

(C) ಅಭಿಪ್ರಾಯವಿಲ್ಲ

(D) ನಿರ್ಬಂಧಿತ ಬೆಂಬಲ

**32.** ಅಮೇರಿಕಾದ ನಾಗರೀಕರನ್ನು ಕಾಡುತ್ತಿರುವ ವಿಷಯ ಯಾವುದು ?

(A) ಆರೋಗ್ಯಪಾಲನೆ (B) ನೌಕರಿ

(C) ಕೊರತೆ (D) ಬಂಡವಾಳಶಾಹಿ

**33.** ಯುರೋಪಿನಲ್ಲಿನ ಆರ್ಥಿಕ ವ್ಯವಸ್ಥೆ ಯಾವ ರೀತಿಯದು ?

(A) ಅಮೇರಿಕಾ ಪೋಷಿತ ಆರ್ಥಿಕ ಸಂಸ್ಥೆಗಳನ್ನು ಅವಲಂಬಿಸಿದೆ

(B) ತೃತೀಯ ಜಗತ್ತನ್ನು ಅವಲಂಬಿಸಿದೆ

(C) ಜಾಗತಿಕ ಹಣಕಾಸಿನ ಸಂಸ್ಥೆಗಳನ್ನು ಅವಲಂಬಿಸಿದೆ

(D) ಆಂತರಿಕ ಹಣಕಾಸಿನ ಸಂಸ್ಥೆಗಳನ್ನು ಅವಲಂಬಿಸಿದೆ

**34.** ಅಮೇರಿಕಾದ ಆರೋಗ್ಯಪಾಲನಾ ಪದ್ಧತಿಯ ಬಗ್ಗೆ ಚಾಮ್‌ಸ್ಕಿಯವರ ನಿಲುವೇನು ?

(A) ಹಗರಣಪೂರಿತ

(B) ಶ್ರೀಮಂತರ ಸೇವೆಗಾಗಿ

(C) ಬಡವರ ಸೇವೆಗಾಗಿ

(D) ಸಮರ್ಥ

**35.** ಅಮೇರಿಕಾದಲ್ಲಿ ಕೊರತೆಯನ್ನು ನೀಗಿಸಲು ಯಾವ ಸಲಹೆಯನ್ನು ನೀಗಿಸಲು ಯಾವ ಸಲಹೆಯನ್ನು ಇಲ್ಲಿ ನೀಡಲಾಗಿದೆ ?

(A) ಯುರೋಪಿನ ಆರೋಗ್ಯಪಾಲನೆ ತರಹ

(B) ಉತ್ತಮ ಸಾರ್ವಜನಿಕ ಆರೋಗ್ಯಪಾಲನೆ

(C) ಅಂತರಾಷ್ಟ್ರೀಯ ಆರ್ಥಿಕ ಸಂಸ್ಥೆಗಳ ಬೆಂಬಲದ ಆರೋಗ್ಯಪಾಲನೆ

(D) ಆರೋಗ್ಯಪಾಲನೆ ಮಾದರಿ

**36.** ವಾಲ್ ಸ್ಟ್ರೀಟ್ ಜರ್ನಲ್‌ಗೆ ಯಾವ ವಿಷಯ ಆಘಾತವನ್ನುಂಟು ಮಾಡಿದೆ ?

(A) ಯುರೋಪಿನಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆ

(B) ಯುರೋಪಿನಲ್ಲಿ ಎಡಪಂಥೀಯ ಮತ್ತು ಬಲಪಂಥೀಯ ಪಕ್ಷಗಳ ಸೋಲು

(C) ಯುರೋಪಿನಲ್ಲಿ ಕಮ್ಯೂನಿಸ್ಟ್ ಆಳ್ವಿಕೆಯ ಸ್ಥಾಪನೆ

(D) ಯುರೋಪಿನಲ್ಲಿ ಪ್ರಜಾಪ್ರಭುತ್ವದ ಕಣ್ಮರೆ

European Commission." Elections are close to meaningless, very much as in Third World countries that are ruled by the international financial institutions. That's what Europe has chosen to become. It doesn't have to.

Returning to the United States, where the situation is not quite that bad, there's the same disparity between public opinion and policy on a very wide range of issues. Take for example ..... national healthcare. The U.S., as you may know has a health system which is an international scandal, it has twice the per capita costs of other OECD countries and relatively poor outcomes. The only privatized, pretty much unregulated system. The public doesn't like it. They've been calling for national healthcare, public options, for years, but the financial institutions think it's fine, so it stays : stasis. In fact, if the United States had a healthcare system like comparable countries there wouldn't be any deficit. The famous deficit would be erased, which doesn't matter that much anyway.

**31.** What is Chomsky's opinion on capitalist democracy ?

(A) Does not supports it

(B) Supports it

(C) He has no opinion

(D) Supports it conditionally

**32.** What is bothering American public ?

(A) Healthcare (B) Jobs

(C) Deficit (D) Capitalism

**33.** What is the economic situation in Europe ?

(A) Depending on American based financial institutions

(B) Depending on third world

(C) Depending on global financial institutions

(D) Depending on internal financial institutions

**34.** What is Chomsky's take on American Healthcare system ?

(A) Scandalous

(B) Serving wealthy

(C) Serving poor

(D) Efficient

**35.** What is the suggestion here to reduce deficit in America ?

(A) Healthcare as in Europe

(B) Better public health care

(C) Healthcare supported by international financial institutions

(D) Model healthcare

**36.** What did shock The Wall Street Journal ?

(A) Establishment of democracy in Europe

(B) Defeat of left and right parties in Europe

(C) Establishment of Communists rule in Europe

(D) Vanishing of democracy in Europe

**37.** ಒಂದು ಕೆಲಸವನ್ನು 10 ಗಂಡಸರು 15 ದಿನದಲ್ಲಿ ಮತ್ತು 15 ಹೆಂಗಸರು 12 ದಿನಗಳಲ್ಲಿ ಮುಗಿಸಬಲ್ಲರು. ಎಲ್ಲಾ 10 ಗಂಡಸರು ಮತ್ತು 15 ಹೆಂಗಸರು ಒಟ್ಟಿಗೆ ಕೆಲಸ ಮಾಡಿದರೆ, ಎಷ್ಟು ದಿನಗಳಲ್ಲಿ ಕಾರ್ಯವು ಮುಗಿಯುತ್ತದೆ ?

(A) 6 (B) $6\frac{1}{3}$

(C) $6\frac{2}{3}$ (D) $7\frac{2}{3}$

**38.** ಈ ಕೆಳಗಿನ ಸರಣಿಯಲ್ಲಿ ಆರನೇ ಸಂಖ್ಯೆಯನ್ನು ಕಂಡುಹಿಡಿಯಿರಿ :

2, 4, 12, 48, 240, ___?___

(A) 960 (B) 1440

(C) 1080 (D) 1920

**39.** ಜನವರಿ 1, 2006 ರಂದು ಭಾನುವಾರವಾಗಿದ್ದರೆ, ಜನವರಿ 1, 2010 ರಂದು ವಾರದ ಯಾವ ದಿನವಾಗಿತ್ತು ?

(A) ಶುಕ್ರವಾರ (B) ಶನಿವಾರ

(C) ಭಾನುವಾರ (D) ಬುಧವಾರ

**40.** ಒಬ್ಬ ವ್ಯಾಪಾರಿಯು ತನ್ನ ಹತ್ತಿರವಿರುವ 1000 kg ಸಕ್ಕರೆಯ ಒಂದು ಭಾಗವನ್ನು 8% ಲಾಭಕ್ಕೆ ಮತ್ತು ಉಳಿದ ಭಾಗವನ್ನು 18% ಲಾಭಕ್ಕೆ ಮಾರಿದನು. ಅವನ ಒಟ್ಟು ಲಾಭ 14% ಆದರೆ, ಅವನು 18% ಲಾಭಾಂಶಕ್ಕೆ ಮಾರಿದ ಸಕ್ಕರೆಯ ಪ್ರಮಾಣವೆಷ್ಟು ?

(A) 400 kg (B) 560 kg

(C) 600 kg (D) 640 kg

**41.** ಒಂದು ಪಟ್ಟಣದ ಜನಸಂಖ್ಯೆ ಎರಡು ವರ್ಷಗಳ ಹಿಂದೆ 62,500 ಆಗಿತ್ತು. ಮಹಾನಗರಗಳಿಗೆ ವಲಸೆ ಹೋಗುವುದರಿಂದ, ಪ್ರತಿ ವರ್ಷ ಜನಸಂಖ್ಯೆಯು 4% ರಷ್ಟು ಕಡಿಮೆಯಾಗುತ್ತಿದೆ. ಈಗಿನ ಪ್ರಸ್ತುತ ಪಟ್ಟಣದ ಜನಸಂಖ್ಯೆ ಎಷ್ಟು ?

(A) 56,700 (B) 57,600

(C) 58,800 (D) 60,000

**42.** GZWRF ನ್ನು ಸಂಕೇತ ಬಳಸಿ BURMA ಎಂದು ಬರೆದರೆ, LJWRFSD ಸಂಕೇತ ಬಳಸಿ ಹೇಗೆ ಬರೆಯಬಹುದು ?

(A) HUNGARY

(B) AUSTRIA

(C) GERMANY

(D) IRELAND

ಈ ಕೆಳಕಂಡ ಮಾಹಿತಿಯನ್ನಾಧರಿಸಿ ಪ್ರಶ್ನೆ ಸಂಖ್ಯೆ **43-48** ರನ್ನು ಉತ್ತರಿಸಿ.

ವಿಮಲ್ ಫ್ಯಾಬ್ರಿಕ್ ಕಂಪನಿಯು ನೂಲುವ, ನೇಯುವ ಮತ್ತು ಬಣ್ಣ ಹಾಕುವ, ಮೂರು ಉತ್ಪಾದನಾ ಹಂತಗಳ ಮೂಲಕ ಎರಡು ಬಟ್ಟೆಗಳ ಬ್ರ್ಯಾಂಡ್‌ಗಳಾದ 'ಫ್ಯಾಬ್ರಿಕ್ X' ಮತ್ತು 'ಫ್ಯಾಬ್ರಿಕ್ Y'ನ್ನು ಉತ್ಪಾದಿಸುತ್ತದೆ. ಕಂಪನಿಯು ಆರು ನೂಲುವ ಯಂತ್ರಗಳನ್ನು, ಹತ್ತು ನೇಯ್ಗೆಯ ಯಂತ್ರಗಳನ್ನು ಹಾಗೂ ಐದು ಬಣ್ಣ ಹಾಕುವ ಯಂತ್ರಗಳನ್ನು ಹೊಂದಿದೆ. ಪ್ರತಿ ಯಂತ್ರವೂ ದಿನ ಒಂದಕ್ಕೆ 10 ಘಂಟೆಗಳು ಕೆಲಸ ಮಾಡುತ್ತದೆ. ಫ್ಯಾಬ್ರಿಕ್ X ನ ಒಂದು ಯೂನಿಟ್‌ನ್ನು ಪೂರ್ಣಗೊಳಿಸಲು ನೂಲುವ ಯಂತ್ರದಲ್ಲಿ 40 ನಿಮಿಷಗಳ, ನೇಯ್ಗೆಯ ಯಂತ್ರದಲ್ಲಿ 2 ಘಂಟೆಗಳ ಹಾಗೂ ಬಣ್ಣ ಹಾಕುವ ಯಂತ್ರದಲ್ಲಿ 30 ನಿಮಿಷಗಳ ಅಗತ್ಯವಿರುತ್ತದೆ. ಹಾಗೆಯೇ ಫ್ಯಾಬ್ರಿಕ್ Y ನ ಒಂದು ಯೂನಿಟ್‌ನ್ನು ಪೂರ್ಣಗೊಳಿಸಲು ನೂಲುವ ಯಂತ್ರದಲ್ಲಿ 60 ನಿಮಿಷಗಳ, ನೇಯ್ಗೆಯ ಯಂತ್ರದಲ್ಲಿ 30 ನಿಮಿಷಗಳ ಹಾಗೂ ಬಣ್ಣ ಹಾಕುವ ಯಂತ್ರದಲ್ಲಿ 60 ನಿಮಿಷಗಳ ಅಗತ್ಯವಿರುತ್ತದೆ. (ಒಂದು ಯೂನಿಟ್ = 50 ಮೀಟರ್‌ಗಳ ಬಟ್ಟೆ )

**43.** ಒಂದು ದಿನದಲ್ಲಿ, ಹೆಚ್ಚೆಂದರೆ ಫ್ಯಾಬ್ರಿಕ್ Y ನ ಎಷ್ಟು ಯೂನಿಟ್‌ಗಳನ್ನು ಪೂರ್ಣಗೊಳಿಸಬಹುದು ?

(A) 20

(B) 30

(C) 40

(D) 50

**37.** 10 men can complete a piece of work in 15 days and 15 women can complete the same work in 12 days. If all the 10 men and 15 women work together, in how many days will the work get completed ?

(A) 6 (B) $6\frac{1}{3}$

(C) $6\frac{2}{3}$ (D) $7\frac{2}{3}$

**38.** Find the sixth term in the following series :

2, 4, 12, 48, 240, __?__

(A) 960 (B) 1440

(C) 1080 (D) 1920

**39.** It was Sunday on January 1st, 2006. What was the day of the week on January 1st, 2010 ?

(A) Friday (B) Saturday

(C) Sunday (D) Wednesday

**40.** A merchant has 1000 kg of Sugar, part of which he sells at 8% profit and the rest at 18% profit. He gains 14% on the whole. The quantity sold at 18% profit is

(A) 400 kg (B) 560 kg

(C) 600 kg (D) 640 kg

**41.** The population of a town 2 years ago was 62,500. Due to migration to big cities, it decreases every year at the rate of 4%. The present population of the town is

(A) 56,700 (B) 57,600

(C) 58,800 (D) 60,000

**42.** If GZWRF is coded as BURMA then how LJWRFSD will be coded ?

(A) HUNGARY

(B) AUSTRIA

(C) GERMANY

(D) IRELAND

Answer questions **43-48** based on the following information :

Vimal Fabric Company, manufactures two brands of cloth Fabric X and Fabric Y through three stages of manufacturing namely spinning, weaving and dyeing. The company has six spinning machines, ten weaving machines and five dyeing machines. Each machine works for 10 hours a day. One unit of Fabric X needs 40 minutes on a spinning machine, 2 hours on a weaving machine and 30 minutes on a dyeing machine in order to be completed. Similarly, one unit of Fabric Y needs 60 minutes on a spinning machine, 30 minutes on a weaving machine and 60 minutes on a dyeing machine in order to be completed. (One unit = 50 metres cloth)

**43.** In a day, how many units of Fabric Y can be completed at most ?

(A) 20

(B) 30

(C) 40

(D) 50

**44.** ಒಂದು ದಿನದಲ್ಲಿ ಫ್ಯಾಬ್ರಿಕ್ Y ನ 20 ಯೂನಿಟ್‌ಗಳನ್ನು ಉತ್ಪಾದಿಸಿದರೆ, ಫ್ಯಾಬ್ರಿಕ್ X ನ ಎಷ್ಟು ಯೂನಿಟ್‌ಗಳನ್ನು ಅದೇ ದಿನ ಪೂರ್ಣಗೊಳಿಸಬಹುದು ?

(A) 0 (B) 30
(C) 40 (D) 45

**45.** ಒಂದು ದಿನದಲ್ಲಿ ಫ್ಯಾಬ್ರಿಕ್ Y ನ 30 ಯೂನಿಟ್‌ಗಳನ್ನು ಮಾತ್ರ ಉತ್ಪಾದಿಸಿದರೆ, ಆ ದಿನ ಎಷ್ಟು ಯಂತ್ರ ಘಂಟೆಗಳು ನಿಷ್ಕ್ರಿಯವಾಗುತ್ತದೆ ?

(A) 120 (B) 130
(C) 135 (D) 150

**46.** ಒಂದು ಹೆಚ್ಚುವರಿ ಬಣ್ಣ ಹಾಕುವ ಯಂತ್ರವನ್ನು ಸೇರಿಸಿದರೆ, ಫ್ಯಾಬ್ರಿಕ್ X ನ ಎಷ್ಟು ಹೆಚ್ಚುವರಿ ಯೂನಿಟ್‌ಗಳನ್ನು ಉತ್ಪಾದಿಸಬಹುದು ?

(A) 0 (B) 5
(C) 8 (D) 10

**47.** ಕೇವಲ ಫ್ಯಾಬ್ರಿಕ್ X ನ್ನು ಮಾತ್ರ ಉತ್ಪಾದಿಸುವುದಾದರೆ, ಉತ್ಪಾದನಾ ಸಾಮರ್ಥ್ಯದಲ್ಲಿ ಗರಿಷ್ಠ ಹೆಚ್ಚಳವಾಗಲು ಯಾವ ಯಂತ್ರವನ್ನು ಖರೀದಿಸಬೇಕು ?

(A) ನೂಲುವ ಯಂತ್ರ
(B) ನೇಯ್ಗೆಯ ಯಂತ್ರ
(C) ಬಣ್ಣ ಹಾಕುವ ಯಂತ್ರ
(D) ನಿರ್ಧರಿಸಲು ಸಾಧ್ಯವಿಲ್ಲ

**48.** ಕೇವಲ ಫ್ಯಾಬ್ರಿಕ್ Y ನ್ನು ಮಾತ್ರ ಉತ್ಪಾದಿಸುವುದಾದರೆ, ಉತ್ಪಾದನಾ ಸಾಮರ್ಥ್ಯದಲ್ಲಿ ಗರಿಷ್ಠ ಹೆಚ್ಚಳವಾಗಲು, ಯಾವ ಯಂತ್ರವನ್ನು ಖರೀದಿಸಬೇಕು ?

(A) ನೂಲುವ ಯಂತ್ರ
(B) ನೇಯ್ಗೆಯ ಯಂತ್ರ
(C) ಬಣ್ಣ ಹಾಕುವ ಯಂತ್ರ
(D) ನಿರ್ಧರಿಸಲು ಸಾಧ್ಯವಿಲ್ಲ

**49.** ಸಾರಾಂಶಾಧಾರಿತ ಮೌಲ್ಯಮಾಪನ ಎಂದರೇನು ?

(A) ಯೋಜನೆಯ ಕಾರ್ಯರೂಪಕ್ಕೆ ಸಿದ್ಧಗೊಳಿಸುವುದು
(B) ಸಮೀಕ್ಷಾಪೂರ್ವ ಅಧ್ಯಯನ
(C) ಪ್ರಯೋಗಾತ್ಮಕ ಅಧ್ಯಯನ
(D) ಮೂಲತಃ ಪರಿಣಾಮ ಅಧ್ಯಯನ

**50.** ಮೌಲ್ಯಮಾಪನವು ಅಳತೆಮಾಪನಕ್ಕಿಂತ ಭಿನ್ನ. ಹಾಗಾದರೆ ಹೇಗೆ ?

(A) ಪರಿಮಾಣಾತ್ಮಕ ನಿರ್ಣಯದ ಪ್ರಕ್ರಿಯೆ
(B) ಪರಿಪೂರ್ಣ ನಿರ್ಣಯದ ಪ್ರಕ್ರಿಯೆ
(C) ಗುಣಾತ್ಮಕ ನಿರ್ಣಯದ ಪ್ರಕ್ರಿಯೆ
(D) ಅಂಕ ಗಳಿಕೆ ಆಧಾರದ ಮೇಲೆ ನಿರ್ಣಯ

**51.** ಕೆಳಗಿನವುಗಳಲ್ಲಿ ಒಂದು ಕಲಿಕೆಯ ಮೂಲಭೂತ ಅಂಶ

(A) ಅಳವಡಿಕೆ
(B) ಗ್ರಹಿಕೆ
(C) ಸಂಜ್ಞಾನ
(D) ಶಿಕ್ಷಣ ಸಾಧನ

**52.** ಇವುಗಳು ಶೈಕ್ಷಣಿಕ ವಿಷಯದ ರಚನೆಯ ಮೂಲಭೂತ ಅಂಶಗಳು

(A) ಉದ್ದೇಶ, ಪಠ್ಯಕ್ರಮ, ನಿಯಮಗಳು, ಶಿಕ್ಷಣ ಸಾಧನಗಳು, ಪರೀಕ್ಷೆ
(B) ಉದ್ದೇಶ, ವಿಷಯ, ಸಂದರ್ಭ, ವಿಧಾನಗಳು, ಮೌಲ್ಯೀಕರಣ
(C) ಪಠ್ಯಕ್ರಮ, ಶಿಕ್ಷಣ ವಿಧಾನ, ಮೌಲ್ಯೀಕರಣ, ಮೌಲ್ಯಮಾಪನ
(D) ಪಠ್ಯಕ್ರಮ, ಶಿಕ್ಷಣ ವಿಧಾನ, ಕಲಿಕೆಯ ಪರಿಣಾಮ, ಮೌಲ್ಯಮಾಪನ

**44.** If 20 units of Fabric Y are made in a day, how many units of Fabric X can be completed the same day ?

(A) 0 (B) 30

(C) 40 (D) 45

**45.** If only 30 units of Fabric Y are made in a day, how many machine hours will be idle that day ?

(A) 120 (B) 130

(C) 135 (D) 150

**46.** If one more dyeing machine is added, at the most how many more units of Fabric X can be made in a day ?

(A) 0 (B) 5

(C) 8 (D) 10

**47.** If only Fabric X has to be made, what machine should be bought so that there is a maximum increase in production capacity ?

(A) Spinning machine

(B) Weaving machine

(C) Dyeing machine

(D) Cannot be determined

**48.** If only Fabric Y has to be made, what machine should be bought so that there is a maximum increase in production capacity ?

(A) Spinning machine

(B) Weaving machine

(C) Dyeing machine

(D) Cannot be determined

**49.** What is summative evaluation ?

(A) Fine tunes project implementation

(B) Pilot study

(C) Experimental study

(D) Basically an impact study

**50.** Evaluation is different from measurement. If so how ?

(A) Process of Quantitative Judging

(B) Comprehensive Process of Judging

(C) Process of Qualitative Judging

(D) Judging on the basis of marks secured

**51.** One of the following is related to fundamentals of learning

(A) Adoption

(B) Perception

(C) Cognition

(D) Teaching Aids

**52.** These are fundamentals of course design

(A) Goals, syllabus, guidelines, teaching aids, examination

(B) Goals, content, context, methods, assessment

(C) Curriculum, teaching method, assessment, evaluation

(D) Syllabus, teaching method, learning outcome, evaluation

**53.** ತರಗತಿಯಲ್ಲಿ ಯಾವ ರೀತಿಯ ಶಾಬ್ದಿಕ ಸಂವಹನ ಬಳಸಲಾಗುತ್ತದೆ ?

(A) ಮೌಖಿಕ

(B) ಮೌಖಿಕ ಮತ್ತು ಬರಹ

(C) ಬರಹ

(D) ಶರೀರ ಭಾಷೆ

**54.** ತರಗತಿಯ ಶಿಕ್ಷಣದಲ್ಲಿ ಸಿಮ್ಯಾನ್‌ಟಿಕ್ಸ್ ಎಂದರೇನರ್ಥ ?

(A) ಅದು ಶಿಕ್ಷಣದ ಉತ್ಕೃಷ್ಟತೆಗೆ ಸಂಬಂಧಿಸಿದೆ

(B) ಅದು ಸಂವಹನದಲ್ಲಿನ ಸಮಸ್ಯೆಗಳಿಗೆ ಸಂಬಂಧಿಸಿದೆ

(C) ಅದು ಶಾಬ್ದಿಕ ಮತ್ತು ಅಶಾಬ್ದಿಕ ಸಂಕೇತಗಳಿಗೆ ಸಂಬಂಧಿಸಿದೆ

(D) ಅದು ಜ್ಞಾನ ಪ್ರಸಾರಕ್ಕೆ ಸಂಬಂಧಿಸಿದೆ

**55.** ವಾತಾವರಣದಲ್ಲಿರುವ ಅನಿಲಗಳ ಕಾರಣದಿಂದ ಭೂಮಿ ಬಿಸಿಯಾಗುವುದನ್ನು ಏನೆಂದು ಕರೆಯುತ್ತಾರೆ ?

(A) ವಾಯು ಮಾಲಿನ್ಯ

(B) ಓಜೋನ್ ಪದರ ತೆಳುಗೊಳ್ಳುವಿಕೆ

(C) ಹಸಿರು ಮನೆ ಪರಿಣಾಮ

(D) ಹಸಿರು ಅನಿಲ ಪರಿಣಾಮ

**56.** ವೈಜ್ಞಾನಿಕವಾಗಿ ಓಜೋನ್‌ನ್ನು ಗುರುತಿಸುವ ವಿಧಾನ

(A) O

(B) $O_2$

(C) $O_3$

(D) $O_4$

**57.** ಮೊಸಳೆಗಳು ಸೂರ್ಯಸ್ನಾನ ಮಾಡುವ ಕಾರಣ

(A) ದೇಹದ ಶಾಖವನ್ನು ಹೆಚ್ಚಿಸಿಕೊಳ್ಳುವುದು

(B) ಚರ್ಮವನ್ನು ಒಣಗಿಸಿಕೊಳ್ಳುವುದು

(C) ದೇಹದ ಶಾಖವನ್ನು ಕಡಿಮೆ ಮಾಡಿಕೊಳ್ಳಲು

(D) ದೇಹದ ಶಾಖವನ್ನು ಕಾಪಾಡಿಕೊಳ್ಳಲು

**58.** ವನ್ಯ ಜೀವಿ ಕಾಯ್ದೆಯನ್ವಯ ರಾಷ್ಟ್ರೀಯ ಉದ್ಯಾನವನ್ನಾಗಿ ಒಂದು ಪ್ರದೇಶವನ್ನು ಯಾರು ಘೋಷಿಸಬಹುದು ?

(A) ಸರ್ವೋಚ್ಚ ನ್ಯಾಯಾಲಯ

(B) ಉಚ್ಚ ನ್ಯಾಯಾಲಯ

(C) ರಾಜ್ಯ ಸರ್ಕಾರ

(D) ಕೇಂದ್ರ ಸರ್ಕಾರ

**59.** 'ಬಯಾಲಾಜಿಕಲ್ ಹಾಟ್‌ಸ್ಪಾಟ್' ಎಂದರೆ

(A) ಜೈವಿಕವಾಗಿ ಬಹಳ ಮುಖ್ಯ ಪ್ರದೇಶ

(B) ಪರಿಸರ ಆತಂಕಕಾರಿ ಹಂತ ತಲುಪಿರುವ ಪ್ರದೇಶ

(C) ಬಹಳ ಬಿಸಿಯಾದ ಸ್ಥಳ

(D) ಜೀವ ವೈವಿಧ್ಯ ಸುರಕ್ಷಿತ ತಾಣ

**60.** ಕರ್ನಾಟಕದ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಯಾರು ?

(A) ವಾಮನಾಚಾರ್ಯ

(B) ಯು. ಆರ್. ರಾವ್

(C) ಮಾಧವ ಗಾಡ್ಗೀಳ್

(D) ಸಿ. ಎನ್. ಆರ್. ರಾವ್

Prepp Your Personal Exams Guide



**53.** What is the type of verbal communication do you find in classroom ?

(A) Spoken

(B) Spoken and written

(C) Written

(D) Body language

**54.** What is meant by semantics in classroom teaching ?

(A) It concerns excellence in teaching

(B) It concerns the problems in communication

(C) It concerns verbal and non-verbal codes

(D) It concerns transmission of knowledge

**55.** The warming of earth due to atmospheric gases is known as

(A) Air pollution

(B) Ozone depletion

(C) Green house effect

(D) Green gas effect

**56.** Ozone is scientifically represented as

(A) O

(B) $O_2$

(C) $O_3$

(D) $O_4$

**57.** Crocodiles prefer sun bath

(A) to elevate body temperature

(B) to dry their skin

(C) to decrease body temperature

(D) to maintain body temperature

**58.** Who can declare an area to be constituted as a national park according to Wild Life Act ?

(A) Supreme Court

(B) High Court

(C) State Government

(D) Central Government

**59.** 'Biological Hot Spot' refers to

(A) Important spot from Biological point of view

(B) Spot where environment has reached dangerous level

(C) Place where temperature is very high

(D) Place where biodiversity is very safe

**60.** Who is the Chairman of Pollution Control Board of Karnataka ?

(A) Vamanacharya

(B) U. R. Rao

(C) Madhav Gadgil

(D) C. N. R. Rao

www.prepp.in

Prepp
Your Personal Exams Guide



(ಅಂಧ ವಿದ್ಯಾರ್ಥಿಗಳಿಗೆ ಮಾತ್ರ)

ಈ ಕೆಳಗಿನ ಗದ್ಯ ಭಾಗವನ್ನು ಗಮನವಿಟ್ಟು ಓದಿ ಮತ್ತು **55** ರಿಂದ **60** ರ ವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಮಾನವನ ಭವಿಷ್ಯವನ್ನು ಬದಲಾಯಿಸುವುದರಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಅಭಿವೃದ್ಧಿಯು ಪ್ರಮುಖ ಪಾತ್ರ ವಹಿಸುವ ಜಗತ್ತಿನಲ್ಲಿ ನಾವು ಬದುಕಿದ್ದೇವೆ. ಆದರೆ ಅಭಿವೃದ್ಧಿಗಾಗಿ ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ದುರ್ಬಳಕೆ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ನಿಜವೆಂದರೆ, ಅಭಿವೃದ್ಧಿಯ ಹೆಸರಿನಲ್ಲಿ ನಾವು ನೈಸರ್ಗಿಕ ಸಂಪನ್ಮೂಲಗಳನ್ನು ಅನೈತಿಕವಾಗಿ ಬಳಸುತ್ತಿರುವುದರಿಂದ ಅಭಿವೃದ್ಧಿಯ ಕಲ್ಪನೆಯೇ ಇವತ್ತಿನ ಸಂದರ್ಭದಲ್ಲಿ ವಿವಾದಾತ್ಮಕವಾಗಿದೆ. ಯಾವ ವಿಜ್ಞಾನ ಪ್ರಕೃತಿಯ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದಿಲ್ಲವೋ ಮತ್ತು ಯಾವ ಅಭಿವೃದ್ಧಿ ಜನಸಾಮಾನ್ಯರ ಅಗತ್ಯಗಳನ್ನು ಗೌರವಿಸುವುದಿಲ್ಲವೋ ಮಾನವನ ಅಸ್ತಿತ್ವವನ್ನೇ ಆತಂಕದಲ್ಲಿಡುತ್ತದೆ. ಗಾಂಧೀಜಿಯ ಪರಿಸರ ಸಂಬಂಧೀ ಚಿಂತನೆಗಳು ಜನರ ಅಗತ್ಯಗಳು ಮತ್ತು ಪರಿಸರದ ನಡುವೆ ಹೊಂದಾಣಿಕೆಯುಂಟು ಮಾಡುವ ಹೊಸ ದೃಷ್ಟಿಯನ್ನು ನೀಡುತ್ತವೆ.

ಗಾಂಧೀಜಿ ಆಧುನಿಕ ಅರ್ಥದಲ್ಲಿ ಪರಿಸರವಾದಿಯಾಗಿರಲಿಲ್ಲ. ಅವರು ಹಸಿರು ತತ್ತ್ವವನ್ನು ಬೋಧಿಸದಿದ್ದರೂ ಅಥವಾ ಪ್ರಕೃತಿ ಕುರಿತು ಕವನಗಳನ್ನು ಬರೆಯದಿದ್ದರೂ ಅವರನ್ನು ಆನ್ವಯಿಕ ಮಾನವ ಜೀವಶಾಸ್ತ್ರದ ಉತ್ತುಂಗ ಶಿಖರವೆನ್ನಲಾಗುತ್ತದೆ.

ಗಾಂಧಿಯವರ ಕಾಲದಲ್ಲಿ ಪರಿಸರದ ಪರಿಸ್ಥಿತಿ ಇಷ್ಟೊಂದು ಹದಗೆಟ್ಟಿರಲಿಲ್ಲ ಎಂಬುದು ನಿಜ. ಆದರೆ ರಾಮಚಂದ್ರ ಗುಹಾನಂಥ ಖ್ಯಾತ ಪರಿಸರ ಬರಹಗಾರರು ಗಾಂಧಿಯನ್ನು ಆರಂಭಿಕ ಪರಿಸರವಾದಿಯೆಂದು ಗುರುತಿಸುತ್ತಾರೆ. ಪರಿಸರ ಕುರಿತ ಅವರ ಚಿಂತನೆಗಳು ಅವರ ಬರಹಗಳಲ್ಲಿ ಹಂಚಿಹೋಗಿವೆ. ಸತ್ಯ, ಅಹಿಂಸೆ, ಸರಳ ಜೀವನ ಪದ್ಧತಿಯ ಮೇಲೆ ನಿಂತಿರುವ ಅವರ ಸತ್ಯಾಗ್ರಹದ ಕಲ್ಪನೆಗಳು ಪ್ರಕೃತಿಗೆ ಮತ್ತು ಪರರಿಗೆ ತೊಂದರೆಯಾಗದಂತೆ ಹೇಗೆ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಬಹುದೆಂಬುದನ್ನು ತೋರಿಸಿಕೊಡುತ್ತವೆ. 'ಪ್ರಕೃತಿಗೆ ಎಲ್ಲರ ಅಗತ್ಯಗಳನ್ನು ಪೂರೈಸುವ ಶಕ್ತಿಯಿದೆ, ಆದರೆ ಎಲ್ಲರ ದುರಾಸೆಯನ್ನಲ್ಲ' ಎಂಬ ಅವರ ಹೇಳಿಕೆ ಆಧುನಿಕ ಪರಿಸರವಾದದ ಒಂದೇ ಸಾಲಿನ ಘೋಷಣೆಯಾಗಿದೆ.

**55.** ಲೇಖಕರು ಹೇಳುವಂತೆ ಅಭಿವೃದ್ಧಿ

(A) ಎಲ್ಲರಿಗೂ ಪ್ರಮುಖವೇನಲ್ಲ

(B) ಮಾನವ ಸಮಾಜವನ್ನು ಬದಲಾಯಿಸಬಲ್ಲದು

(C) ಅದರಂತೆಯೇ ಒಪ್ಪಿಕೊಳ್ಳಬಹುದಾದ್ದು

(D) ತಂತ್ರಜ್ಞಾನಕ್ಕೆ ಸಂಬಂಧಿಸಿದ್ದಲ್ಲ

Prepp
Your Personal Exams Guide



**(For Blind Candidates Only)**

Read the following passage carefully and answer the questions **55** to **60** :

We live in a world in which science, technology and development play important roles in changing human destiny. However, over-exploitation of natural resources for the purpose of development leads to serious environmental hazards. In fact, the idea of development is itself controversial in the present situation as in the name of development, we are unethically plundering natural resources. It is true that a science that does not respect nature's needs and a development which does not respect people's needs threatens human survival. The green thoughts of Gandhi give us a new vision to harmonise nature with the needs of people.

Gandhi was not an environmentalist in the modern sense. Although he did not create a green philosophy or write nature poems, he is often described as an "apostle of applied human ecology." It is a fact that environmental concerns were minimal in Gandhi's time; but eminent environmental writers like Ramachandra Guha consider him an early Environmentalist. His views on nature are scattered throughout his writings. His ideas relating to Satyagraha based on truth and non-violence, simple life style, and development reveal how sustainable development is possible without doing any harm to nature and our fellow beings. His idea that "nature has enough to satisfy every one's needs, but not to satisfy anybody's greed" became one line ethic to modern environmentalism.

**55.** The author argues that development

(A) has no importance at all

(B) can change human society

(C) is acceptable in itself

(D) is unrelated to technology

**56.** ಅಭಿವೃದ್ಧಿಯೆಂಬುದು ಯಾಕೆ ಇಡಿಯಾದ ಮೌಲ್ಯವಲ್ಲ ?

(A) ಅದು ಪಾಶ್ಚಿಮಾತ್ಯ ಕಲ್ಪನೆ

(B) ಅದು ನೈತಿಕ ಅಪರಾಧ

(C) ಎಲ್ಲ ರೀತಿಯ ಅಭಿವೃದ್ಧಿಯೂ ಕೆಟ್ಟದ್ದು

(D) ಅದು ವಿವೇಚನಾರಹಿತವಾಗಿ ಪ್ರಾಕೃತಿಕ ಸಂಪನ್ಮೂಲಗಳನ್ನು ದುರ್ಬಳಕೆ ಮಾಡುತ್ತದೆ

**57.** ಮಾನವನ ಬದುಕುವಿಕೆ ಆತಂಕದಲ್ಲಿದೆಯೆಂದು ಲೇಖಕರು ಹೇಳುವುದು ಯಾಕೆಂದರೆ

(A) ಪ್ರಾಕೃತಿಕ ಸಂಪನ್ಮೂಲಗಳು ಏನೇನೂ ಉಳಿದಿಲ್ಲ

(B) ವಿಜ್ಞಾನ ಪರಿಸರವನ್ನು ಕಡೆಗಣಿಸುತ್ತಿದೆ

(C) ಮಾನವರು ಅನೈತಿಕರಾಗಿದ್ದಾರೆ

(D) ಸಮಾಜಗಳು ಆಧುನಿಕತೆಯ ಹಿಂದೆ ಬಿದ್ದಿವೆ

**58.** ಗಾಂಧೀಜಿಯವರು

(A) ತರಬೇತಿ ಹೊಂದಿದ ಪರಿಸರವಾದಿಯಾಗಿದ್ದರು

(B) ಪರಿಸರದ ಸೌಂದರ್ಯ ಕುರಿತು ವಿಪುಲವಾಗಿ ಬರೆದವರಾಗಿದ್ದರು

(C) ಪ್ರಕೃತಿಯೊಂದನ್ನೇ ಗಮನದಲ್ಲಿಟ್ಟು ಯೋಚಿಸಿದವರಾಗಿದ್ದರು

(D) ಪ್ರಕೃತಿ ಮತ್ತು ಮಾನವ ಅಗತ್ಯಗಳೆರಡರ ಕುರಿತು ಒತ್ತಿ ಹೇಳಿದ ಅಪ್ಪಟ ಚಿಂತಕರಾಗಿದ್ದರು

**59.** ಗಾಂಧೀಜಿಯು ಬಯಸಿದ ಅಭಿವೃದ್ಧಿ

(A) ನಮ್ಮನ್ನು ಪಾಶ್ಚಿಮಾತ್ಯರಿಗೆ ಸಮಾನರಾಗಿ ಮಾಡುವಂತಹುದಾಗಿತ್ತು

(B) ಅದು ಪರಿಸರವನ್ನು ರಕ್ಷಿಸುತ್ತಿತ್ತು

(C) ಆಧುನಿಕ ಬದುಕಿನ ರೀತಿಯಲ್ಲಿ ಯಾವ ಬದಲಾವಣೆಯನ್ನು ಬಯಸದು

(D) ಬಂಡವಾಳಶಾಹಿಯನ್ನು ಆಮೂಲಾಗ್ರವಾಗಿ ಕಿತ್ತು ಹಾಕುವುದು

**60.** ಈ ಗದ್ಯಭಾಗದ ಪ್ರಕಾರ ಗಾಂಧೀಜಿಯವರ ಪರಿಸರವಾದವೆಂದರೆ

(A) ಕೆಟ್ಟ ಆಧುನಿಕ ವಿರೋಧಿ

(B) ನೈಜವಲ್ಲದ್ದು

(C) ಆಧುನಿಕ ಸಮಾಜಕ್ಕೆ ಅಪ್ರಸ್ತುತ

(D) ಆಧುನಿಕ ಪರಿಸರವಾದಕ್ಕೆ ದಾರಿತೋರುವ ಸಾಮರ್ಥ್ಯವುಳ್ಳದ್ದು

**56.** Why is development not an absolute value ?

(A) It is a Western concept

(B) It is morally wrong

(C) All forms of development are bad

(D) It exploits natural resources indiscriminately

**57.** The author says that human survival is in danger because

(A) nature's resources are no longer there

(B) science is ignoring nature

(C) men are now immoral

(D) societies are hankering after modernity

**58.** Gandhi was

(A) a well-trained environmentalist

(B) a writer who wrote prolifically on one beauties of nature

(C) a thinker who focussed only on nature

(D) an original thinker who emphasized both nature and human needs

**59.** Gandhi wanted a development

(A) Which would make us the equals of the West

(B) Which would also protect nature

(C) Which would not need any change in the modern life style

(D) Which would destroy capitalism altogether

**60.** According to this passage Gandhi's environmentalism was

(A) hopelessly nonmodern

(B) unrealistic

(C) irrelevant to modern society

(D) capable of guiding modern environmentalism

www.prepp.in



ಚಿತ್ತು ಬರಹಕ್ಕಾಗಿ ಸ್ಥಳ

Space for Rough Work